# ನಗರದಲ್ಲಿ ಪುಸ್ತಕ ಪ್ರದರ್ಶನ

ಬೆಂಗಳೂರು ,ನವೆಂಬರ್10,2005

ಕೇಂದ್ರ ಸರ್ಕಾರದ ಪ್ರಕಾಶನ ವಿಭಾಗ ಹೊರತಂದ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟವನ್ನು ಬೆಂಗಳೂರಿನ ಯೋಜನಾ ಕಚೇರಿಯಲ್ಲಿ ಏರ್ಪಡಿಸಲಾಗುವುದು. ರಾಷ್ಟ್ರೀಯ ಪುಸ್ತಕ ಸಪ್ತಾಹ ಅಂಗವಾಗಿ ಪುಸ್ತಕ ಪ್ರದರ್ಶನವು ನವೆಂಬರ್ 10–18 , 2005 ರವರೆಗೆ ನಡೆಯಲಿದೆ .

ಮಕ್ಕಳ ಕಥೆ ಪುಸ್ತಕಗಳು, ಕಲೆ, ಸಂಸ್ಕೃತಿ, ಇತಿಹಾಸಕ್ಕೆ ಸಂಬಂಧಪಟ್ಟ ಪುಸ್ತಕಗಳು ,ಅಪರೂಪದ ವರ್ಣ ಚಿತ್ರಗಳು, ಸಂಗೀತ, ನೃತ್ಯ ಕುರಿತ ಪುಸ್ತಕಗಳು, ಭಾರತೀಯ ಜಾನಪದ ನೃತ್ಯಗಳನ್ನು ಕುರಿತ ಪುಸ್ತಕಗಳು ಪ್ರದರ್ಶನದಲ್ಲಿ ಇಡಲಾಗುವುದು. 1950–2000 ಅವಧಿಯ ರಾಷ್ಟ್ರಪತಿಗಳ ಗಣರಾಜ್ಯೋತ್ಸವದ ದಿವಸದ ಭಾಷಣಗಳು, ಮಾಜಿ ರಾಷ್ಟ್ರಪತಿಗಳು ಹಾಗೂ ಪ್ರಧಾನ ಮಂತ್ರಿಗಳ ಆತ್ಮಚರಿತ್ರೆ ಹಾಗೂ ಭಾಷಣಗಳು, ರಾಷ್ಟ್ರಪತಿ ಭವನ: ರಾಷ್ಟ್ರಪತಿಗಳ ನಿವಾಸದ ಚರಿತ್ರೆ ಇತ್ಯಾದಿ ಪುಸ್ತಕಗಳು ಮಾರಾಟಕ್ಕೆ ಇಡಲಾಗುವುದು.

ಪ್ರದರ್ಶನವು ಕಚೇರಿಯ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಾಯಂಕಾಲ 5–45 ರವರೆಗಿರುತ್ತದೆ . ಪ್ರದರ್ಶನ ನಡೆಯುವ ಸ್ಥಳ: ಯೋಜನಾ.'ಎಫ್'ವಿಂಗ್, ಒಂದನೆ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–34.ದೂರವಾಣಿ 25537244.

******

ಆ ದ : ಪಚ :ಸು :ಆ:ಕ: ಬೆಂ : 15:00 10–11–2005